ಉಳಿದಿದೆ. ಬೆಳೆ ಪರಿಹಾರ ಎಂದು ಒಂದು ರೂಪಾಯಿ, ಎರಡು ರೂಪಾಯಿ ಕೊಡುವುದಲ್ಲ. ಕೃಷಿ ಹಾಗೂ ತೋಟಗಾರಿಕೆ ಇಲಾಖೆಯಿಂದ analysis ಮಾಡಿಸಬೇಕು. ನಾನು ಬೆಳಗಾಂ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದ್ದಕ್ಕೆ ಕೊಡುತ್ತೇವೆ ಎಂದು ಹೇಳಿದ್ದರು, ಅದು ಇನ್ನೂ ಆಗಿಲ್ಲ. ಹಣಕಾಸು ಇಲಾಖೆಗೆ ಪ್ರಸ್ತಾವನೆ ಹೋಗಿ ಒಂದು ವರ್ಷವಾಯಿತು.

ಶ್ರೀ ಬಿ.ರಮಾನಾಥ ರೈ : ಎಷ್ಟು ಬೆಳೆ ನಷ್ಟವಾಗಿದೆ ಅದಕ್ಕೆ ಪರಿಹಾರ ಕೊಡಬೇಕೆಂದು ತೀರ್ಮಾನ ಮಾಡುವುದು ಸರ್ಕಾರದ್ದು. ಆದಷ್ಟು ಶೀಘ್ರದಲ್ಲಿಯೇ ಅದಕ್ಕೆ ಒಪ್ಪಿಗೆಯನ್ನು ಕೊಡಿಸುವಂತಹ ಪ್ರಯತ್ನ ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಹಣಕಾಸು ಇಲಾಖೆ ನಮ್ಮ ವಿಧಾನಸೌಧದಲ್ಲಿಯೇ ಇದೆಯಲ್ಲಾ 6 ತಿಂಗಳು, ಒಂದು ವರ್ಷವಾದರೂ ಚರ್ಚೆಯಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಚರ್ಚೆಯನ್ನು ಈ ರೀತಿ ಮಾಡಿದರೆ ಆಗುತ್ತದೆಯೇ ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : file ಅನ್ನು clear ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ.

ಶ್ರೀ ಸಿ.ಟಿ.ರವಿ : ಹಣಕಾಸು ಇಲಾಖೆಗೆ "ಸಕಾಲ" ಅನುಷ್ಠಾನ ಮಾಡಿ.

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ ಸಾಕು. ಮಾನ್ಯ ಈಶ್ವರ ಖಂಡ್ರೆಯವರು ಪ್ರಶ್ನೆ ಕೇಳುವುದು.

ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರ

03(45) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) :– ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

(ಅ) ಬೀದರ್ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಾಗಿ ಸ್ವಾಧೀನ ಪಡಿಸಿಕೊಂಡ ಭೂಮಿಗೆ ಪರಿಹಾರ ನೀಡಲು ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; ಯಾವ ದಿನಾಂಕದಂದು ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; (ವಿವರ ನೀಡುವುದು)

(ಆ) ಸರ್ಕಾರದಿಂದ ಅನುದಾನ ಬಿಡುಗಡೆಯಾದರೂ ಇನ್ನೂ ಅನೇಕ ಭೂ ಮಾಲೀಕರಿಗೆ ಪರಿಹಾರ ಸಿಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ನ್ಯಾಯಾಲಯದ ಆದೇಶದಂತೆ ಭೂ ಮಾಲೀಕರಿಗೆ ಹೆಚ್ಚುವರಿಯಾಗಿ ಎಷ್ಟು ಪ್ರಮಾಣದಲ್ಲಿ ಹಣ ಹಾಗೂ ಬಡ್ಡಿ ನೀಡಬೇಕಾಗುತ್ತದೆ ; (ವಿವರ ನೀಡುವುದು)

(ಈ) ಈ ರೀತಿ ವಿಳಂಬದಿಂದಾಗಿ ಸರ್ಕಾರದ ಖಜಾನೆ ಹಾಗೂ ರೈತರಿಗೆ ನಷ್ಟ ಉಂಟಾಗುವುದರಿಂದ ಸರ್ಕಾರ ತಕ್ಷಣ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳುವುದೇ ?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು):–

(ಅ) ಬೀದರ್ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಾಗಿ ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರ ನೀಡಲು ಒಟ್ಟು ರೂ.34.97 ಕೋಟಿ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುತ್ತದೆ.

ದಿನಾಂಕವಾರು ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತೆ ಇರುತ್ತದೆ.

1) 2008 ರಿಂದ 2010ರವರೆಗೆ ರೂ. 10.50 ಕೋಟಿ

2) ದಿನಾಂಕ: 31–03–2011ಕ್ಕೆ ರೂ. 8.11 ಕೋಟಿ

3) ದಿನಾಂಕ: 31–03–2012ಕ್ಕೆ ರೂ.12.89 ಕೋಟಿ

4) ದಿನಾಂಕ: 31–03–2014ಕ್ಕೆ ರೂ. 3.47 ಕೋಟಿ

ಒಟ್ಟು ರೂ. 34.97 ಕೋಟಿ

(ಆ) ಹೌದು ಬಂದಿದೆ.

(ಇ) ಬೀದರ್ ಜಿಲ್ಲೆಯಲ್ಲಿ ನ್ಯಾಯಾಲಯದ ಆದೇಶದಂತೆ ಹೆಚ್ಚುವರಿಯಾಗಿ ಒಟ್ಟು 484 ಪ್ರಕರಣಗಳಲ್ಲಿ ಒಟ್ಟು ರೂ.16,53,07,920/– ಪರಿಹಾರ ಧನ ಪಾವತಿಸುವುದು ಬಾಕಿ ಇರುತ್ತದೆ. ಸದರಿ ಮೊತ್ತದ ಅನುದಾನ ಬಿಡುಗಡೆ ಕೋರಿ ಭೂ ಕೋರಿಕೆ ಇಲಾಖೆಯವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುದಾನ ಬಿಡುಗಡೆಯಾದ ಕೂಡಲೇ ಹೆಚ್ಚುವರಿ ಪರಿಹಾರಧನ ಪಾವತಿಗಾಗಿ ಕ್ರಮ ಕೈಗೊಳ್ಳಲಾಗುವುದು.

ಮಾನ್ಯ ನ್ಯಾಯಾಲಯದ ಆದೇಶದಂತೆ ಭೂಮಾಲೀಕರಿಗೆ ಪ್ರತಿ ಎಕರೆಗೆ ಹೆಚ್ಚುವರಿಯಾಗಿ ರೂ.1.50 ಲಕ್ಷದಿಂದ ರೂ. 6.00 ಲಕ್ಷದವರೆಗೆ ಪರಿಹಾರಧನ ಪಾವತಿಸಬೇಕಾಗಿದೆ. ಅಲ್ಲದೇ ಮೊದಲನೇ ವರ್ಷಕ್ಕೆ ಶೇ.9% ತದನಂತರ ಅಂತಿಮವಾಗಿ ಪರಿಹಾರ ಹಂಚಿಕೆ ಮಾಡುವವರೆಗೆ ಶೇ 15% ಬಡ್ಡಿ ನೀಡಬೇಕಾಗುತ್ತದೆ.

(ಈ) ಹೌದು. ಪರಿಹಾರ ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬೀದರ್ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಾಗಿ ರೈತರ ಸಾಕಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವುದು ಇದೆ. ಅದರಲ್ಲಿ ಸುಮಾರು 30 ವರ್ಷದಿಂದ ಕಡಿಮೆ ಹಣ ಕೊಟ್ಟಿದ್ದಾರೆ ಎಂದು ಕೆಲ ರೈತರು ಕೋರ್ಟಿಗೆ ಹೋಗಿದ್ದಾರೆ ಮತ್ತು ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಜಲಾಶಯದಲ್ಲಿ ನೀರು ಸಂಗ್ರಹಣೆ ಮಾಡಿದ ನಂತರ ಹಿನ್ನೀರಿನಿಂದ ಹೆಚ್ಚುವರಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಅದಕ್ಕೆ ಸರ್ಕಾರದಿಂದ 2008 ರಿಂದ 2010 ರವರೆಗೆ 10.50 ಕೋಟಿ ರೂ.ಗಳು, 2011ರಲ್ಲಿ 8.11 ಕೋಟಿ ರೂ.ಗಳು, 2012 ರಲ್ಲಿ 12.89 ಕೋಟಿ ರೂ.ಗಳು, 2014 ರಲ್ಲಿ 3.47 ಕೋಟಿ ರೂ.ಗಳು, ಒಟ್ಟು 34 ಕೋಟಿ 97 ಲಕ್ಷ ರೂ.ಗಳ ಅನುದಾನ ಬಿಡುಗಡೆಯಾದರೂ ಇಲ್ಲಿಯವರೆಗೂ ಆ ಹಣ ರೈತರಿಗೆ ಪಾವತಿಯಾಗಿಲ್ಲ. ಸರ್ಕಾರದಿಂದ ಸ್ವಾಧೀನಪಡಿಸಿಕೊಂಡ ಭೂಮಿಗೆ ಸುಮಾರು 15% ಬಡ್ಡಿ ಕಟ್ಟಬೇಕಾಗುತ್ತದೆ. ವಿಳಂಬ ನೀತಿಯಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಏನು ಹೆಚ್ಚುವರಿ ಹೊರೆ ಬೀಳುತ್ತಿದೆ ಮತ್ತು ರೈತರು ಇದರಿಂದಾಗಿ ಏನು ಕಷ್ಟವನ್ನು ಅನುಭವಿಸುತ್ತಿದ್ದಾರೆ ಅದಕ್ಕೆ ಯಾರು ಜವಾಬ್ದಾರರು ?

ಅಧ್ಯಕ್ಷರು : ತಾವು ಪ್ರಶ್ನೆಯನ್ನು ಕೇಳಿ. ಹಣ ಬಿಡುಗಡೆಯಾಗಿದೆ. ರೈತರಿಗೆ ಹಣ ಪಾವತಿಯಾಗಿದೆಯೋ ಇಲ್ಲವೋ ? ಪಾವತಿಯಾಗಿಲ್ಲವೆಂದರೆ ಎಷ್ಟು ದಿವಸದೊಳಗೆ ಕೊಡುತ್ತೀರಿ ಎಂದು ಕೇಳಿ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಬೆಳೆ ಪರಿಹಾರ ರೈತರಿಗೆ ಪಾವತಿ ಆಗಿಲ್ಲವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಮಾನ್ಯ ಕಂದಾಯ ಸಚಿವರು ಮೊನ್ನೆ ಪರಿಶೀಲನಾ ಸಭೆ ಮಾಡಿದ್ದಾರೆ. ಬೆಳೆ ಪರಿಹಾರ ತಕ್ಷಣ ಬಿಡುಗಡೆಯಾಗುವಂಥದ್ದು, ಉದಾಹರಣೆಗೆ ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತಿದ್ದೇನೆ, ಸುಮಾರು 426 ಕೇಸ್‌ಗಳು ಕೋರ್ಟ್‌ನಲ್ಲಿ ತೀರ್ಮಾನವಾಗಿದೆ. ಸುಮಾರು ಒಂದು ವರ್ಷ, ಎರಡು ವರ್ಷವಾದರೂ ಆ ಒಂದು ಇಲಾಖೆಗೆ attachment ಬರುತ್ತಿದೆ. ಆದರೂ ಇನ್ನೂ ಹಣ ಪಾವತಿ ಆಗುತ್ತಿಲ್ಲ. ಸರ್ಕಾರದ ಮಟ್ಟದಲ್ಲಿ ವಿಳಂಬವಾಗುತ್ತಿದೆ.

ಅಧ್ಯಕ್ಷರು : ಹಣ ಬಿಡುಗಡೆಯಾಗಿದೆ, ಆದರೆ ಪಾವತಿಯಾಗಿಲ್ಲ ಏಕೆ ? ಎಷ್ಟು ದಿವಸದೊಳಗೆ ಕೊಡುತ್ತೀರಿ ಎಂದು ಕೇಳಿ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಎಷ್ಟು ದಿವಸದಲ್ಲಿ ಹಣ ಬಿಡುಗಡೆ ಮಾಡಲಾಗುವುದು? ಕೋರ್ಟ್ ಕೇಸ್‌ನಲ್ಲಿರುವಂಥದ್ದನ್ನು ಎಷ್ಟು ದಿವಸದೊಳಗೆ ತೀರ್ಮಾನ ಮಾಡಿ ನೇರವಾಗಿ ಸರ್ಕಾರಕ್ಕೆ ಕೊಡಿಸುವ ವ್ಯವಸ್ಥೆ ಮಾಡಲಾಗುವುದು ?

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ನಾನು ಕಳೆದ ವಾರ ಬೀದರ್‌ಗೆ ಹೋಗಿದ್ದೆ. ಅಲ್ಲಿ ನಾನು ನಮ್ಮ ಇಲಾಖೆಯ ಬಗ್ಗೆ review ಮಾಡುವಾಗ ಮಾನ್ಯ ಶಾಸಕರೂ ಕೂಡ ಇದ್ದರು. ಸಭೆಯಲ್ಲಿ ಮುಖ್ಯವಾಗಿ ಕಾರಂಜಾ ಯೋಜನೆ ಹಾಗೂ ಸಣ್ಣ ನೀರಾವರಿ ಇಲಾಖೆಯ ಅಡಿಯಲ್ಲಿ ಕೆರೆಗಳ ನಿರ್ಮಾಣಕ್ಕೆ ತೆಗೆದುಕೊಂಡಿರುವ ಬಗ್ಗೆ ಪ್ರಸ್ತಾಪ ಮಾಡಿದರು. ಬಹುಶಃ ನಾವು ಏನೇ compensation ಕೊಟ್ಟರೂ ಅದು ಕೋರ್ಟ್‌ಗೆ ಹೋಗಿ ಹೋಗುತ್ತದೆ. ರೈತರು ಕೋರ್ಟ್‌ಗೆ ಹೋಗಿ ಅವರಿಗೆ ಏನು ಪರಿಹಾರ ಕೊಡಬೇಕೆಂದು ಕೋರ್ಟ್‌ನಿಂದ ಆದೇಶ ಬಂದಿದೆ. ಕೋರ್ಟ್ ಆದೇಶ ಬಂದಾಗಲೂ, ಹಣ ಬಿಡುಗಡೆಯಾಗಿಯೂ ಹಣ ರೈತರಿಗೆ ಪಾವತಿಯಾಗಿಲ್ಲವೆಂದು ಮಾನ್ಯ ಸದಸ್ಯರು ಜಿಲ್ಲಾಧಿಕಾರಿಗಳ ಸಭೆಯಲ್ಲಿ ಪ್ರಸ್ತಾಪ ಮಾಡಿದರು. ನಾನು ಆಗ ಏಕೆ ಕೊಟ್ಟಿಲ್ಲವೆಂದು ವಿಚಾರಣೆ ಮಾಡಿದೆ. ಮಾರ್ಚ್ ಕೊನೆಯಲ್ಲಿ ಹಣ ಬಂದಿದೆ. ಬಿಡುಗಡೆಯಾಗಿರುವಂತಹ ಹಣವನ್ನು ಕೊಡಬೇಕೆಂದು ಹೇಳಿದ್ದೇವೆ. ಈಗಾಗಲೇ ಹಣ treasury ಗೆ ಹೋಗಿ treasury ಯಿಂದ ಬಿಲ್ ಆಗಿ ಚೆಕ್‌ಗಳು ರೆಡಿಯಾಗಿ ಬಂದಿವೆ. ಹಣವನ್ನು ಕೊಡಲು ನಾವು ರೆಡಿ ಇದ್ದೇವೆ. ನ್ಯಾಯಾಲಯದ ಆದೇಶದಂತೆ ನಾವು ಹಣವನ್ನು ಕೊಡುತ್ತಿದ್ದೇವೆ. ಒಂದು ಪ್ರಶ್ನೆ ಏನೆಂದರೆ, ನ್ಯಾಯಾಲಯದ ಆದೇಶ ಮಾಡಿದಾಗಲೂ ಕೂಡ ನೀವು ಹಣವನ್ನು ಹೆಚ್ಚುವರಿಯಾಗಿ ಬಿಡಗಡೆ ಮಾಡದೇ ಇದ್ದರೂ ಕೂಡ ಅಲ್ಲಿ ಏನು ಹೇಳುತ್ತಾರೆ ಅದಕ್ಕೆ 9% ರಂತೆ ಬಡ್ಡಿಯನ್ನು ಒಂದು ವರ್ಷದವರೆಗೆ ಕೊಡಬೇಕು. ಆದಾದ ಮೇಲೆ 15% ಕೊಡಬೇಕು. ನೀವು ತಡ ಮಾಡಿದರೆ ಸರ್ಕಾರದ ಬೊಕ್ಕಸಕ್ಕೆ ಏನು ಹೊರೆಯಾಗುತ್ತಿದೆ ಇದಕ್ಕೆ ಏನು ಕಾರಣ? ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಿ ಎನ್ನುವುದು ಪ್ರಶ್ನೆಯಾಗಿದೆ. ಹಾಗಾಗಿ ಅದನ್ನು ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇನೆ. ಇದಕ್ಕೆ ಯಾರು ಕಾರಣ ? ಎನ್ನುವುದನ್ನು ಪರಿಶೀಲಿಸಿ ಅದರ ಬಗ್ಗೆ ಸೂಕ್ತವಾದಂತಹ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. We are Waiting.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ, ನನ್ನ ಕೊನೆ ಪ್ರಶ್ನೆ, ಬೆಳೆ ಪರಿಹಾರ ನೀಡಲು ಏನು ವಿಳಂಬವಾಗುತ್ತಿದೆ ಅದಕ್ಕೆ ಸರ್ಕಾರ ಏನಾದರೂ ಕಾಲಮಿತಿಯನ್ನು ನಿಗದಿಪಡಿಸುತ್ತದೆಯೇ? ರೈತರು ಮೊದಲೇ ಕಷ್ಟದಲ್ಲಿದ್ದಾರೆ. ಅವರಿಗೆ ತಕ್ಷಣ ಪರಿಹಾರ ಕೊಡುವಂಥದ್ದು, ಅದಕ್ಕೆ ಕಾಲಮಿತಿಯಲ್ಲಿ ಕೋರ್ಟ್ ಕೇಸ್ ಇರಬಹುದು ಅಥವಾ compensation ಬಿಡುಗಡೆಯಾಗಿರುವಂಥದ್ದು ಇರಬಹುದು, ತಕ್ಷಣ ರೈತರಿಗೆ ಹಣ ಮುಟ್ಟಿಸಲಿಕ್ಕೆ ಏನು ಕ್ರಮ ಜರುಗಿಸಲಾಗುವುದು?

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ಮೊನ್ನೆ ಪರಿಶೀಲನಾ ಸಭೆಯಲ್ಲಿ ಜಿಲ್ಲಾಧಿಕಾರಿಯವರ ಹತ್ತಿರ ಮಾತನಾಡಿ, ಯಾವುದೇ ಕಾರಣಕ್ಕೂ ಇದು ವಿಳಂಬವಾಗಬಾರದು ಎಂದು ಹೇಳಿದ್ದೇನೆ. ನಾವು ಏನು ಹಣವನ್ನು ಬಿಡುಗಡೆ ಮಾಡಿದ್ದೇವೆ ಅದು ತಕ್ಷಣ ಕೊಡಬೇಕು ಎಂದು ಬಹಳ ಸ್ಪಷ್ಟವಾಗಿ

ಹೇಳಿದ್ದೇನೆ. ಸ್ವಲ್ಪ problem ಇತ್ತು. Land Acquisition Officer ರವರು ಇರಲಿಲ್ಲ. ಅದನ್ನು Assistant Commissioner ರವರಿಗೆ ವಹಿಸಿದ್ದೇವೆ Treasury ಗೆ ಹೋಗಿದೆ. ಬಿಲ್ ಬಂದಿದೆ. ಚೆಕ್‌ಗಳು ರೆಡಿ ಇವೆ. ಕೊಡುತ್ತಿದ್ದೇವೆ. ಯಾವುದೇ ವಿಳಂಬವಾಗದ ರೀತಿ ನೋಡಿಕೊಳ್ಳುತ್ತೇವೆ.

ಶ್ರೀ ಅಶೋಕ್ ಖೇಣಿ : ಮಾನ್ಯ ಅಧ್ಯಕ್ಷರೆ, Compensation ಬಗ್ಗೆ ಒಂದು ನಿಮಿಷ ಮಾತನಾಡುತ್ತೇನೆ.

January 16, 2013 ರಲ್ಲಿ ಸರ್ಕಾರ High Court ನಲ್ಲಿ Chief Justice ಅವರ ಮುಂದೆ ಕಾರಂಜಾ ಯೋಜನೆ ಸಲುವಾಗಿ within three months Rs.55 crores compensation ಕೊಡುತ್ತೇವೆಂದು commitment ಕೊಟ್ಟಿತು. Three Months, ಆಯಿತು one year four months ಆಯಿತು. ಇದುವರೆಗೂ compensation ಕೊಟ್ಟಿರುವುದಿಲ್ಲ. ಅದರ ಬಗ್ಗೆ ರೈತರುಗಳು ಈಗ contempt petition ಹಾಕಿದ್ದಾರೆ. High Court has served a contempt notice, ಇವತ್ತು hearing ಆಗುತ್ತಿದೆ. The Chief Justice has asked, Why should not these officers be taken to jail for disobeying the High Court? ಎಂದು. ಅದರ ಬಗ್ಗೆ ಮಾನ್ಯ ಸಚಿವರು ಹೇಳುತ್ತಿಲ್ಲ, 55 ಕೋಟಿ ರೂಪಾಯಿಗಳಿಗೆ ಸಂಬಂಧಿಸಿದಂತೆ ತಾವು Commit ಮಾಡಿ ಕೊಡುತ್ತೇವೆಂದು ಹೇಳಿದ್ದು ಏತಕ್ಕಾಗಿ ಕೊಟ್ಟಿಲ್ಲವೆಂದು ಈ ಬಗ್ಗೆ ಅವರು ಸ್ವಲ್ಪ ಹೇಳಬೇಕು.

ಅಧ್ಯಕ್ಷರು : O.K.

ಶ್ರೀ ವಿ.ಶ್ರೀನಿವಾಸ ಪ್ರಸಾದ್: Commitment ಇದೆ. ನಾನು ಈ ಬಗ್ಗೆ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಈ ಬಗ್ಗೆ ನಮ್ಮ ಇಲಾಖೆಯಲ್ಲಿಯೂ ಮಾತನಾಡಿ ನಮ್ಮ Commitment ಏನಿದೆ High Court ನವರು ಏನು ಕೊಟ್ಟಿದ್ದಾರೆ ಅದನ್ನು ನಾವು ಮಾಡಿಕೊಡುತ್ತೇವೆ.

ಅಧ್ಯಕ್ಷರು : O.K.

ತುಂಗಭದ್ರಾ ಮಂಡಳಿ ಸದಸ್ಯರ ನೇಮಕಾತಿ ಹಾಗೂ ರದ್ದಿಯಾತಿ

04(63) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ):– ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

(ಅ) ತುಂಗಭದ್ರಾ ಮಂಡಳಿ (T.B.Board) ಈಗ ಅಸ್ತಿತ್ವದಲ್ಲಿದೆಯೇ ; (ಮಂಡಳಿ ರಚನೆಯ ಪೂರ್ಣ ವಿವರ ನೀಡುವುದು)